## ನೀರ ಉಳಿವಿಗೆ ಅಮೃತ ಬೊಗಸೆಗಳು

‘ನೀರ ಉಳಿವಿಗೆ ಅಮೃತ ಬೊಗಸೆಗಳು’ (ರೂಪಾ ಹಾಸನ, ಜೂ. 16) ಅರ್ಥಪೂರ್ಣ ಲೇಖನ. ಜನಜಾಗೃತಿಗೆ ತಮ್ಮನ್ನು ಇಡಿಯಾಗಿ ತೊಡಗಿಸಿಕೊಂಡ ಶ್ರೀಪಡ್ರೆ, ಶಿವಾನಂದ ಕಳವೆ, ಗವಿಮಠದ ಶ್ರೀಗಳ ಜೊತೆಗೆ ನಮಗ ಗೊತ್ತಿರದ ಇನ್ನೂ ಹಲವಾರು ಮಹನೀಯರನ್ನು ಪರಿಚಯಿಸಿದ್ದೀರಿ. ಅಂತರ್ಜಲ ಹೆಚ್ಚಿಸುವ ನಿಟ್ಟಿನಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಚಿತ್ರದುರ್ಗದ ದೇವರಾಜ್ ರೆಡ್ಡಿ, ದೇಶಪಾಂಡೆ ಪ್ರತಿಷ್ಠಾನದ ಸಹಯೋಗದಲ್ಲಿ ಜನಜಾಗೃತಿಯ ಕುರಿತು ಸಾಕಷ್ಟು ಕೆಲಸ ಮಾಡಿದ ಸಿಕಂದರ್ ಮೀರಾನಾಯಕ, ಚಿತ್ರನಟ ಯಶ್ ಬಗ್ಗೆಯೂ ಪ್ರಸ್ತಾಪ ಇರಬೇಕಿತ್ತು.

—ಭೀಮಣ್ಣ ಹುಣಸೀಕಟ್ಟಿ, ಬಾಗಲಕೋಟ

## ನಿಂಬೆಯಾಟವಯ್ಯಾ



‘ನಿಂಬೆಯಾಟವಯ್ಯಾ’ (ನಳಿನಿ ಟಿ. ಭೀಮಪ್ಪ, ಜೂ. 9) ಅವರ ಹಾಸ್ಯಬರಹ ಚೆನ್ನಾಗಿದೆ. ಮಂದಹಾಸ ಬೀರುತ್ತಲೇ ಓದುವಂತೆ ಮಾಡುತ್ತದೆ. ಬಿಸಿಲು, ಹೆಚ್ಚಾಗಿರುವ ಸಮಯದಲ್ಲಿಯೇ ನಿಂಬೆ ಇಷ್ಟೊಂದು ದುಬಾರಿಯಾಗಿರುವುದು ಸೆಕೆಯ ಜೊತೆ ಶಾಮೀಲಾಗಿ ಜನರಿಗೆ ತೊಂದರೆ ಕೊಡಲು ಏನಾದರೂ ಒಳಒಪ್ಪಂದ ಮಾಡಿಕೊಂಡಿರುವ ಹಾಗೆ ಅನ್ನಿಸುತ್ತದೆ.

—ಮಾಧವ ಉದ್ಯಾವರ, ಮೈಸೂರು

## ಶಕ್ತಿ ಸಂಕಷ್ಟ

‘ಶಕ್ತಿ ಸಂಕಷ್ಟ’ (ಗುರುರಾಜ್ ಎಸ್., ದಾವಣಗೆರೆ, ಜೂ. 9) ಲೇಖನದಲ್ಲಿನ ಮಾಹಿತಿ ಚೆನ್ನಾಗಿವೆ. ಆದರೆ ವ್ಯಕ್ತಿಗತವಾಗಿ ನಾವೆಲ್ಲರೂ ಈ ಭೂಮಿಯನ್ನು ರಕ್ಷಿಸಲು ಏನು ಮಾಡಬೇಕು ಎಂಬ ಸಲಹೆಗಳೂ ಇದ್ದರೆ ಚೆನ್ನಾಗಿತ್ತು.

—ಆಶಾ ಲತಾ

ತುಂಬ ಮಾಹಿತಿಪೂರ್ಣವಾದ ಲೇಖನ. ಪ್ರತಿಯೊಬ್ಬ ಎಂಜಿನಿಯರ್ ಕೂಡ ಇದನ್ನು ಓದಲೇಬೇಕು.

## ವಿಭಾ ಪ್ರಶಸ್ತಿಗೆ ಆಹ್ವಾನ

2022ನೇ ಸಾಲಿನ ವಿಭಾ ಸಾಹಿತ್ಯ ಪ್ರಶಸ್ತಿಗೆ ಮೂವತ್ತಕ್ಕೂ ಹೆಚ್ಚು ಸ್ವರಚಿತ ಕವಿತೆಗಳ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ. ಈ ಪ್ರಶಸ್ತಿಯು ₹ 10,000 ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಕೊನೆಯ ದಿನಾಂಕ: ಜು. 15. ವಿಳಾಸ: ಸುನಂದಾ & ಪ್ರಕಾಶ ಕಡಮೆ, ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ 2022 ನಂ. 90, ‘ನಾಗಸುಧೆ ಜಗಲಿ’, 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ 580031 ದೂರವಾಣಿ: 9845779387

ಈ ಲೇಖನದಲ್ಲಿ ಉಲ್ಲೇಖಿತವಾಗಿರುವ ಸಮಸ್ಯೆ ವಾಸ್ತವಿಕವಾಗಿದೆ. ನಾನೂ ರೈತರಿಗೆ ಸೋಲಾರ್ ಶಕ್ತಿಯ ಬಗ್ಗೆ ಅರಿವು ಮೂಡಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದೇನೆ. ಸರ್ಕಾರವೂ ಇದಕ್ಕೆ ಸಹಾಯಧನದ ಮೂಲಕ ಬೆಂಬಲ ನೀಡುತ್ತಿದೆ.

—ಹನುಮಂತ್ ಕನಿಹಾಳ್, ಕಲ್ಬುರ್ಗಿ

## ಮಾನವೀಯತೆ ಆಗಿದೆಯೇ ದುಬಾರಿ?

‘ಮಾನವೀಯತೆ ಆಗಿದೆಯೇ ದುಬಾರಿ?’ (ಮಹತಿ, ಜೂ. 9) ಲೇಖನ ಪ್ರಸ್ತುತ ಸಮಾಜದ ಕೊರತೆಯ ಮುಖವೊಂದನ್ನು ಅನಾವರಣಗೊಳಿಸಿದೆ. ಮಾನವರೇ ಮಾನವರೊಂದಿಗೆ ಅಮಾನವೀಯವಾಗಿ ನಡೆದುಕೊಳ್ಳುವ ಕೆಲವು ಪ್ರಸಂಗಗಳನ್ನು ಗಮನಿಸಿದರೆ, ನಮ್ಮ ನಡುವೆ ನಡೆಯುತ್ತಿರುವ ಅನೇಕ ಸಮಾಜಮುಖಿ ಕಾರ್ಯಗಳ ಮಾನವೀಯ ಕಳಕಳಿ ಯಾರನ್ನೂ ತಲುಪಿಲ್ಲವೇ ಎಂಬ ಶಂಕೆ ಕಾಡದಿರದು.

—ಎಚ್. ಸಿದ್ದಾರ್ಥ, ಉಡುಪಿ

ಲೇಖಕರು ತಿಳಿಸಿರುವಂತೆ ಕೆಲವು ಘಟನೆಗಳನ್ನು ಅವಲೋಕಿಸಿದರೆ ನಿಜಕ್ಕೂ ಮಾನವೀಯತೆ ಎಲ್ಲಿ ಹೋಯಿತು ಎಂದು ಆತಂಕವಾಗುತ್ತದೆ. ಇದಕ್ಕೆ ಪ್ರಾಣಿ, ಪಕ್ಷಿ, ಪರಿಸರಗಳೂ ಹೊರತಾಗಿಲ್ಲ. ಹಾಗೆಯೇ ಸಹಾಯ ಹಸ್ತ ನೀಡುವ ಸಂಖ್ಯೆ ಕೂಡ ಹೆಚ್ಚುತ್ತಿರುವುದು ಸಮಾಧಾನ ತಂದಿದೆ.

—ಭಾರತೀ ಗಂಗಾಧರ್, ಬೆಂಗಳೂರು

## ಮುದ್ದಣ ಪ್ರಶಸ್ತಿಗೆ ಆಹ್ವಾನ

ಕಾಂತಾವರ ಕನ್ನಡ ಸಂಘವು 2022ನೇ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಗೆ, ಕವನ ಸಂಗ್ರಹದ ಹಸ್ತಪ್ರತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ₹ 10,000 ನಗದು, ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಹಸ್ತಪ್ರತಿ ಕಳಿಸಿಕೊಡಲು ಕೊನೆಯ ದಿನಾಂಕ: ಸೆ. 15 ಹೆಚ್ಚಿನ ಮಾಹಿತಿಗೆ: kannadasanghakanthavara@gmail.co. ದೂರವಾಣಿ: 9900701666 / 9008978366

## ದೇವರಮನೆ ಬೆಟ್ಟ

‘ದೇವರಮನೆ ಬೆಟ್ಟ’ (ಕೆ.ಟಿ. ಜಯಶ್ರೀ, ಜೂ. 9) ಲೇಖನ ಓದಿ ಸಂತಸಪಟ್ಟೆ. ಇದು ದೇವರ ಮನೆಯೇ ಹೌದು. ಏಕೆಂದರೆ ದೇವರು ಇಷ್ಟ ಪಡುವುದು ಇಂತಹ ತಾಣವನ್ನು ತಾನೆ? ಗೆಳೆಯರ ಸಲಹೆಯ ಮೇರೆಗೆ ನಾನೂ ಅಲ್ಲಿಗೆ ಹೋಗಿದ್ದೆ. ವ್ಯೂ ಪಾಯಿಂಟ್ ಹೋಗಿ ನೋಡಿದರೆ, ಪಶ್ಚಿಮ ಘಟ್ಟದ ತುತ್ತ ತುದಿಯ ಶಿಖರಗಳನ್ನು ಹಾದು ಬರುವ ಮೋಡಗಳನ್ನು ಒಳಗೊಂಡ ಅಪೂರ್ವ ನೋಟ ಸಿಗುತ್ತದೆ. ಆಹಾರ, ಪಾನೀಯ ದೊರಕದಿರುವುದು ಒಂದು ನ್ಯೂನ್ಯತೆಯೇ ಹೌದು.

—ಪಿ. ವಾಸುದೇವ್ ಭಟ್, ಉಡುಪಿ

## ಪ್ರೇಮ ಬರಹ ನೂರು ತರಹ

‘ಪ್ರೇಮಬರಹ ನೂರು ತರಹ’ (ನಿಂಗಪ್ಪ ಮುದೇನೂರು, ಜೂ. 9) ಲೇಖನದಲ್ಲಿ ಮರಗಳ ಕೊಂಬೆಗಳ ಮೇಲೆ ಪ್ರೇಮಿಗಳು ತಮ್ಮ ಹೆಸರುಗಳನ್ನು ಕೆತ್ತಿರುವುದನ್ನು ‘ಪವಿತ್ರವಾದ ಬದುಕಿನ ಸೊಗಸು’ ಎಂದು ಉಲ್ಲೇಖಿತವಾಗಿದೆ. ಇದು ತಪ್ಪು. ನಮ್ಮ ಹೆಸರುಗಳನ್ನು ಮರಗಳ ಮೇಲೆ ಕೆತ್ತುವುದು ವಿಕೃತಿ. ಮರಗಳ ಹೊರಕವಚವು ಎಪಿಡರ್ಮಿಸ್‌ನಿಂದ ಆವೃತ್ತವಾಗಿರುತ್ತದೆ. ಇದು ಹಾನಿಗೊಂಡರೆ ಅಲ್ಲಿ ಪರೋಪಜೀವಿಗಳು ನೆಲೆಸಲು ಮತ್ತು ಆ ಮರದ ಸಹಜ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಪ್ರೇಮಿಗಳು ತಮ್ಮ ಪ್ರೇಮವನ್ನು ಅಮರಗೊಳಿಸಲು ಗಿಡಮರಗಳನ್ನು ನೆಟ್ಟು ಬೆಳೆಸುವ ಕೆಲಸವಾಗಬೇಕೆ ಹೊರತು ಈ ರೀತಿಯಲ್ಲಿ ಮರವೊಂದಕ್ಕೆ ನೋವು ಕೊಡುವುದಲ್ಲ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ




ಲೇಖನ ಈಗಿನ ಸಮಾಜದ ಸ್ವಾಸ್ಥ್ಯಕ್ಕೆ ಹಿಡಿದ ಕನ್ನಡಿ. ಮಾನವೀಯ ಮೌಲ್ಯಗಳು ನಶಿಸಿಹೋಗುತ್ತಿರುವ ಪ್ರಸಕ್ತ ಸಮಯದಲ್ಲಿ ಜನರ ಕಣ್ಣು ತೆರೆಸುವ ಒಳ್ಳೆಯ ಪ್ರಯತ್ನ. ವಿಕಲಚೇತನರು ಬೇರೆ ಲೋಕದಿಂದೇನೂ ಬಂದಿದ್ದಲ್ಲ. ನಮ್ಮ ನಿಮ್ಮ ಪರಿಸರದಲ್ಲಿಯೇ ಕಾಣಸಿಗುವವರು ಅವರಿಗೆ ನೀವು ಸಹಾಯ ಮಾಡದಿದ್ದರೂ ಪರವಾಗಿಲ್ಲ ಅಸಡ್ಡೆ ತೋರಬೇಡಿ, ಮಾನವೀಯ ಹೃದಯದಿಂದ ವರ್ತಿಸಿ.

—ಶಾಂತ ಕುಮಾರ್

## ಅಕ್ಷರ ದೋಷಗಳನ್ನು ತಪ್ಪಿಸಿ

ಜೂ. 9ರ ಸಂಚಿಕೆಯ ‘ಆಹಾರ’ ಪುಟದ ‘ಖರ್ಜೂರ – ರಾಗಿ ಸ್ಮೂದಿ’ ರೆಸಿಪಿಯ ಮೊದಲ ಸಾಲಿನಲ್ಲಿ ಅರ್ಧ ಲೀಟರ್ ‘ನೀರು’ ಎಂಬ ಜಾಗದಲ್ಲಿ ‘ಹಾಲು’ ಎಂದು ಮುದ್ರಿತವಾಗಿದೆ. ಹಾಗೆಯೇ ‘ಕಡೆಯ ಭೇಟಿ’ ಕಿರುಚಿತ್ರ ವಿಮರ್ಶೆಯಲ್ಲಿ ‘ಅಜ್ಜನೊಬ್ಬ ಅವಳ ಅಪ್ಪನನ್ನು ಕೇಳಿಕೊಂಡು ಮನೆಗೆ ಬರುತ್ತಾಳೆ’ ಎಂದು ವ್ಯಾಕರಣ ದೋಷ ಉಳಿದುಕೊಂಡಿದೆ.

—ಆಶಾ ಅಪ್ರಮೇಯ, ದಾವಣಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in